ಇಲಾಖೆಯಿಂದ 353 ಕೋಟಿ one third amount ಗೆ ನಾವು ಇಟ್ಟುಕೊಂಡು ಕೇಳಿದ್ದೇವೆ. ಅತಿ ಶೀಘ್ರದಲ್ಲಿಯೇ ಎಲ್ಲಾ ಸೇತುವೆಗಳಿಗೆ ಅನುಮೋದನೆ ದೊರೆಯಲಿದೆ. ಈ ಕೆಲಸ ಮಾಡಿಸಿ ಕೊಡುತ್ತೇನೆಂದು ಹೇಳಲಿಕ್ಕೆ ಬಯಸುತ್ತೇನೆ.

ಅಧ್ಯಕ್ಷರು: ಕಾಕಾ ಸಾಹೇಬ್ ಪಾಂಡುರಂಗ ಪಾಟೀಲ್. ಇಲ್ಲ. ಎಂ.ಟಿ.ಕೃಷ್ಣಪ್ಪನವರು. ಇಲ್ಲ. ಕೆ.ಎಂ. ಶಿವಲಿಂಗೇಗೌಡರವರು ತಾವು ಕೇಳಿ.

ಕೆ.ಎಂ.ಎಫ್.ನಲ್ಲಿ ಅವ್ಯವಹಾರ ನಡೆದಿರುವುದು

7 (11) ಶ್ರೀ ಕೆ.ಎಂ. ಶಿವಲಿಂಗೇಗೌಡ (ಅರಸೀಕೆರೆ): ಮಾನ್ಯ ಸಹಕಾರ ಮತ್ತು ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಿನಾಂಕ: 11.1.2011 ರಂದು ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಕೆ.ಎಂ.ಎಫ್.ಗೆ ಸಂಬಂಧಪಟ್ಟಂತೆ 300–400 ಕೋಟಿ ರೂ.ಗಳ ಅವ್ಯವಹಾರ ನಡೆದಿದೆ ಎಂದು ಹೇಳಿರುವುದು ನಿಜವಲ್ಲವೇ ;

ಆ) ಹಾಗಿದ್ದಲ್ಲಿ, ಈ ಚಾರ್ಜಸ್ ಇರುವ ಅಧಿಕಾರಿಗಳ ಮತ್ತು ಇತರರ ಹೆಸರುಗಳೇನು ; (ಪೂರ್ಣ ಮಾಹಿತಿ ನೀಡುವುದು)

ಇ) ಇವರುಗಳ ಮೇಲಿರುವ ಚಾರ್ಜಸ್‌ಗಳೇನು ; ಈ ಚಾರ್ಜಸ್‌ಗಳು ಯಾವ ಯಾವ ವರ್ಷಗಳಲ್ಲಿ ನಡೆದಿವೆ ; (ಚಾರ್ಜಸ್‌ಗಳ ಸಹಿತ ಪೂರ್ಣ ಮಾಹಿತಿ ನೀಡುವುದು)

ಈ) ಈ ಚಾರ್ಜಸ್‌ಗಳ ಮೇಲೆ ಇದುವರೆವಿಗೂ ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ಪೂರ್ಣ ಮಾಹಿತಿ ನೀಡುವುದು) ?

ಶ್ರೀ ಲಕ್ಷ್ಮಣ ಸ. ಸವದಿ (ಸಹಕಾರ ಮತ್ತು ಕೃಷಿ ಮಾರುಕಟ್ಟೆ ಸಚಿವರು):

ಅ) ದಿನಾಂಕ: 11.1.2011ರಂದು ಸನ್ಮಾನ್ಯ ಮುಖ್ಯಮಂತ್ರಿಗಳು ಕೆ.ಎಂ.ಎಫ್.ಗೆ ಸಂಬಂಧಪಟ್ಟಂತೆ ರೂ. 300–400 ಕೋಟಿಗಳ ಅವ್ಯವಹಾರಗಳ ಆರೋಪ ಇದೆ ಎಂದು ತಿಳಿಸಿರುವುದು ನಿಜವಿರುತ್ತದೆ.

ದಿನಾಂಕ: 20.1.2011ರಂದು ಲೆಕ್ಕಪರಿಶೋಧನಾ ನಿರ್ದೇಶಕರಿಂದ ಬಂದಿರುವ 2001–02 ರಿಂದ 2007–08ನೇ ಸಾಲುಗಳ ಮರುಪರಿಶೀಲನಾ ವರದಿಗಳ ಪ್ರಕಾರ ಕೆ.ಎಂ.ಎಫ್. ಮತ್ತು ಅದರ ಘಟಕಗಳಲ್ಲಿ ನಡೆದಿರುವ ಅವ್ಯವಹಾರಗಳ ಪ್ರಮಾಣವು ಕೆಳಗಿನಂತಿದೆ.

ಘಟಕ	ಆರ್ಥಿಕ ನಷ್ಟ / ದುರುಪಯೋಗ (ರೂ.)	ಆರ್ಥಿಕ ನಷ್ಟ / ಆದಾಯ ಕೊರತೆ (ರೂ.)	ಆರ್ಥಿಕ ಅವ್ಯವಹಾರ (ರೂ.)
ಡೆಂಪೋ ಡೈರಿ, ಅಸಂಗಿ, ಬಾಗಲಕೋಟೆ ಜಿಲ್ಲೆ	65,74,555.95	1,74,05,009.76	–
ಕೆ.ಎಂ.ಎಫ್.	6,44,900.00	3,84,88,903.68	12,97,54,000.00
ಒಟ್ಟು	**72,19,455.95**	**5,58,93,913.44**	**12,97,54,000.00**

ಆ) ಮತ್ತು ಇ) ಡೆಂಪೋ ಡೈರಿ, ಅಸಂಗಿ, ಬಾಗಲಕೋಟೆ ಜಿಲ್ಲೆ

ವರ್ಷ	ಆರೋಪಿತರ ಹೆಸರು	ಆರೋಪ	ಒಳಗೊಂಡ ಮೊತ್ತ (ರೂ.ಗಳಲ್ಲಿ)
2001–02 ರಿಂದ 2002–03	ಶ್ರೀ ಕೆ.ಎಲ್. ಗಜೇಂದ್ರನ್, ಡೆಂಪೋ ಡೈರಿಯ ಮಾಜಿ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಶ್ರೀ ಚನ್ನೇಗೌಡ ಮಾಜಿ ಅಧ್ಯಕ್ಷರು ಜಂಟಿಯಾಗಿ	ಘಟಕದಲ್ಲಿ ಉತ್ಪಾದಿಸುವ ಹಾಲಿನ ಉತ್ಪನ್ನಗಳನ್ನು ಸಗಟು ಮಾರಾಟ ಮಾಡುವಾಗ ಖಾಸಗಿ ಸಂಸ್ಥೆಗಳಿಗೆ ಕಡಿಮೆ ದರದಲ್ಲಿ ಮಾರಾಟ ಮಾಡಿ ದುರುಪಯೋಗ ಪಡಿಸಿಕೊಂಡಿರುವುದು	60,27,659.95
	ಶ್ರೀ ಕೆ.ಎಲ್. ಗಜೇಂದ್ರನ್, ಡೆಂಪೋ ಡೈರಿ ಮಾಜಿ ವ್ಯವಸ್ಥಾಪಕ ನಿರ್ದೇಶಕರು, ಮಾಜಿ ಅಧ್ಯಕ್ಷರಾದ ಶ್ರೀ ಚನ್ನೇಗೌಡರವರು	ಕಲ್ಲಿದ್ದಲು ಖರೀದಿ ವ್ಯವಹಾರದಲ್ಲಿ ವಾಸ್ತವವಾಗಿ ಜಮಾ ಬಂದಿರುವುದಕ್ಕಿಂತ ಹೆಚ್ಚಿನ ದಾಸ್ತಾನನ್ನು ದಾಸ್ತಾನು ಪುಸ್ತಕದಲ್ಲಿ ನಮೂದಿಸಿ ಅದಕ್ಕೆ ಪೂರಕವಾದ ದಾಖಲೆಗಳನ್ನು ಸೃಷ್ಟಿಸಿ ಆರ್ಥಿಕ ನಷ್ಟ/ಹಣ ದುರುಪಯೋಗಪಡಿಸಿರುವುದು.	20,832.00

ವರ್ಷ	ಆರೋಪಿತರ ಹೆಸರು	ಆರೋಪ	ಒಳಗೊಂಡ ಮೊತ್ತ (ರೂ.ಗಳಲ್ಲಿ)
2003–04 ರಿಂದ 2004–05	ಶ್ರೀ ಎಸ್.ಪಿ. ಕೃಷ್ಣ ಮತ್ತು ಶ್ರೀ ಎಸ್.ಕೆ. ಮಹದೇವ್, ಡೆಂಪೋ ಡೈರಿಯ ಮಾಜಿ ವ್ಯವಸ್ಥಾಪಕ ನಿರ್ದೇಶಕರು	ಕಲ್ಲಿದ್ದಲು ಖರೀದಿ ವ್ಯವಹಾರದಲ್ಲಿ ವಾಸ್ತವವಾಗಿ ಜಮಾ ಬಂದಿರುವುದಕ್ಕಿಂತ ಹೆಚ್ಚಿನ ದಾಸ್ತಾನನ್ನು ದಾಸ್ತಾನು ಪುಸ್ತಕದಲ್ಲಿ ನಮೂದಿಸಿ ಅದಕ್ಕೆ ಪೂರಕವಾದ ದಾಖಲೆಗಳನ್ನು ಸೃಷ್ಟಿಸಿ ಆರ್ಥಿಕ ನಷ್ಟ/ಹಣ ದುರುಪಯೋಗಪಡಿಸಿರುವುದು.	86,786.00
	ಶ್ರೀ ಎಸ್.ಪಿ. ಕೃಷ್ಣ, ಡೆಂಪೋ ಡೈರಿಯ ಮಾಜಿ ವ್ಯವಸ್ಥಾಪಕ ನಿರ್ದೇಶಕರು	ಮದರ್ ಡೈರಿ, ದೆಹಲಿ, ಇದಕ್ಕೆ ಕೆನೆರಹಿತ ಹಾಲಿನ ಪುಡಿ (ಎಸ್.ಎಂ.ಪಿ.) ಮತ್ತು ಬೆಣ್ಣೆ ಪರಿವರ್ತನೆ ದರವನ್ನು ಕಡಿಮೆ ವಿಧಿಸಿ ಸಂಸ್ಥೆಗೆ ಆದಾಯ ಕೊರತೆ / ನಷ್ಟ ಉಂಟು ಮಾಡಿರುವುದು	1,17,00,3996.39

ವರ್ಷ	ಆರೋಪಿತರ ಹೆಸರು	ಆರೋಪ	ಒಳಗೊಂಡ ಮೊತ್ತ (ರೂ.ಗಳಲ್ಲಿ)
2005–06 ರಿಂದ 2006–07	1. ಡಾ: ಎಸ್.ಪಿ. ಕೃಷ್ಣ, ಡೆಂಪೋ ಡೈರಿಯ ಮಾಜಿ ವ್ಯವಸ್ಥಾಪಕ ನಿರ್ದೇಶಕರು 2. ಡಾ: ಜಿ.ಎನ್. ಜಯಪ್ರಕಾಶ್ ರೆಡ್ಡಿ, ಡೆಂಪೋ ಡೈರಿಯ ಮಾಜಿ ವ್ಯವಸ್ಥಾಪಕ ನಿರ್ದೇಶಕರು 3. 157ನೇ ನಿರ್ದೇಶಕ ಮಂಡಳಿಯ ಸಭೆಯಲ್ಲಿ ಹಾಜರಿದ್ದ ಸದಸ್ಯರು	ಮದರ್ ಡೈರಿ, ದೆಹಲಿ, ಇದಕ್ಕೆ ಕೆನೆರಹಿತ ಹಾಲಿನ ಪುಡಿ (ಎಸ್.ಎಂ.ಪಿ.) ಪರಿವರ್ತನೆಗೆ ದರವನ್ನು ಕಡಿಮೆ ವಿಧಿಸಿ ಸಂಸ್ಥೆಗೆ ಆದಾಯ ಕೊರತೆ / ನಷ್ಟ ಉಂಟು ಮಾಡಿರುವುದು	16,45,722.70
	ಡಾ: ಎಸ್.ಪಿ. ಕೃಷ್ಣ, ಡೆಂಪೋ ಡೈರಿಯ ಮಾಜಿ ವ್ಯವಸ್ಥಾಪಕ ನಿರ್ದೇಶಕರು ಹಾಗೂ ನಂತರದ ವ್ಯವಸ್ಥಾಪಕ ನಿರ್ದೇಶಕರು	ಕಲ್ಲಿದ್ದಲು ಖರೀದಿ ವ್ಯವಹಾರದಲ್ಲಿ ವಾಸ್ತವವಾಗಿ ಜಮಾ ಬಂದಿರುವುದಕ್ಕಿಂತ ಹೆಚ್ಚಿನ ದಾಸ್ತಾನನ್ನು ದಾಸ್ತಾನು ಪುಸ್ತಕದಲ್ಲಿ ನಮೂದಿಸಿ ಅದಕ್ಕೆ ಪೂರಕವಾದ	4,39,278.00

ವರ್ಷ	ಆರೋಪಿತರ ಹೆಸರು	ಆರೋಪ	ಒಳಗೊಂಡ ಮೊತ್ತ (ರೂ.ಗಳಲ್ಲಿ)
		ದಾಖಲೆಗಳನ್ನು ಸೃಷ್ಟಿಸಿ ಆರ್ಥಿಕ ನಷ್ಟ/ಹಣ ದುರುಪಯೋಗ ಪಡಿಸಿರುವುದು.	
2007–08	ಶ್ರೀ ಐ.ಆರ್. ರಾಮಲಿಂಗೇಗೌಡ, ಡೆಂಪೋ ಡೈರಿಯ ಅಧ್ಯಕ್ಷರು ಹಾಗೂ ಶ್ರೀ ಬರ್ನಾರ್ಡ್ ಅರ್ನೆಸ್ಟ್, ಡೆಂಪೋ ಡೈರಿಯ ವ್ಯವಸ್ಥಾಪಕ ನಿರ್ದೇಶಕರು	ಸಿದ್ಧಾರ್ಥ ಡೈರಿಯೊಂದಿಗೆ ಡೆಂಪೋ ಡೈರಿ ನಡೆಸಿರುವ ವ್ಯವಹಾರದಲ್ಲಿ ನಿಗದಿಪಡಿಸಿದ ಪರಿವರ್ತನಾ ವೆಚ್ಚಕ್ಕಿಂತ ಕಡಿಮೆ ವಸೂಲಿ ಮಾಡಿ ಸಂಸ್ಥೆಗೆ ಆದಾಯ ಕೊರತೆ/ ಆರ್ಥಿಕ ನಷ್ಟ ಉಂಟು ಮಾಡಿರುವುದು.	40,03,651.67
	ಶ್ರೀ ಬರ್ನಾರ್ಡ್ ಅರ್ನೆಸ್ಟ್, ಡೆಂಪೋ ಡೈರಿಯ ವ್ಯವಸ್ಥಾಪಕ ನಿರ್ದೇಶಕರು	ಗನಿಂಡು ಮಿಲ್ಕ್ ಮತ್ತು ಮಿಲ್ಕ್ ಪ್ರಾಡಕ್ಟ್ ಗೋವಾ ಇವರಿಗೆ ಅಧಿಕ ಪ್ರೋಸೆಸಿಂಗ್ ಚಾರ್ಜ್ ಪಾವತಿಸಿ ನಷ್ಟ ಉಂಟು ಮಾಡಿರುವುದು	55,239.00

ವರ್ಷ	ಆರೋಪಿತರ ಹೆಸರು	ಆರೋಪ	ಒಳಗೊಂಡ ಮೊತ್ತ (ರೂ.ಗಳಲ್ಲಿ)
ಕೆ.ಎಂ.ಎಫ್. (ನಿ) ಬೆಂಗಳೂರು			
2001–02 ರಿಂದ 2002–03	ಶ್ರೀ ಸಿ. ಚನ್ನಕೃಷ್ಣಯ್ಯ, ಉಪ ನಿರ್ದೇಶಕರು, ಮಾರ್ಕೆಟಿಂಗ್	ಹಾಲು ಉತ್ಪನ್ನಗಳ ಸಗಟು ಮಾರಾಟ ಮಾಡುವಾಗ ನಿಗದಿಪಡಿಸಿರುವ ದರಗಳಿಗಿಂತ ಕಡಿಮೆ ದರದಲ್ಲಿ ಮಾರಾಟ ಮಾಡಿ ದುರುಪಯೋಗ ಪಡಿಸಿಕೊಂಡಿರುವುದು.	3,33,000.00
	ಶ್ರೀ ಎನ್. ಮೃತ್ಯುಂಜಯ, ನಿವೃತ್ತ ಪ್ರಧಾನ ವ್ಯವಸ್ಥಾಪಕರು, ಎನ್.ಎಂ.ಪಿ. ಘಟಕ	ಸಮಾಜ ಕಲ್ಯಾಣ ಇಲಾಖೆಯಿಂದ ಕೆ.ಎಂ.ಎಫ್.ಗೆ (ನಂದಿನಿ ಮಿಲ್ಕ್ ಪ್ರಾಡಕ್ಟ್) ಬರಬೇಕಾದ ಮೊಬಲಗನ್ನು ಆಡಳಿತ ಮಂಡಳಿ ಒಪ್ಪಿಗೆ ಪಡೆಯದೆ ನಷ್ಟದ ಖಾತೆಗೆ ವರ್ಗಾಯಿಸಿರುವುದು.	20,08,398.55

ವರ್ಷ	ಆರೋಪಿತರ ಹೆಸರು	ಆರೋಪ	ಒಳಗೊಂಡ ಮೊತ್ತ (ರೂ.ಗಳಲ್ಲಿ)
2003–04 ರಿಂದ 2004–05	ಸಂಬಂಧಪಟ್ಟ ದಿನಾಂಕಗಳಂದು ನಡೆದ ಆಡಳಿತ ಮಂಡಳಿಯ ಸಭೆಗಳ ಹಾಜರಿದ್ದ ಅಧ್ಯಕ್ಷರು, ಸದಸ್ಯರು ಹಾಗೂ ವ್ಯವಸ್ಥಾಪಕ ನಿರ್ದೇಶಕರು	ಸಂಸ್ಥೆಯ ಬೈಲಾ ಸಂಸ್ಥೆ 3.3.16ಕ್ಕೆ ವಿರುದ್ಧವಾಗಿ ಮಹಾಮಂಡಳದ ವತಿಯಿಂದ ನಂದಿನಿ ಹೈನುಗಾರಿಕೆ ರೈತರ ಕಲ್ಯಾಣ ಟ್ರಸ್ಟ್ ರಚಿಸಿ ಅದಕ್ಕೆ ವಂತಿಕೆ ನೀಡಿರುವುದು. ಈ ಲೋಪವನ್ನು 2005–06, 2006–07 ಮತ್ತು 2007–08ರ ಮರು ಪರಿಶೀಲನಾ ವರದಿಗಳಲ್ಲಿಯೂ ತೋರಿಸಿದ್ದು ಅವುಗಳನ್ನು ಇಲ್ಲಿಯೇ ಅಳವಡಿಸಲಾಗಿದೆ.	12,97,54,000,00
	ದಿನಾಂಕ: 20.1.2005ರಂದು ನಡೆದ ಆಡಳಿತ ಮಂಡಳಿಯ ಸಭೆಗಳಲ್ಲಿ ಹಾಜರಿದ್ದ ಅಧ್ಯಕ್ಷರು, ಸದಸ್ಯರು ಹಾಗೂ ವ್ಯವಸ್ಥಾಪಕ ನಿರ್ದೇಶಕರು	ನಂದಿನಿ ರೈತರ ಕಲ್ಯಾಣ ಟ್ರಸ್ಟ್‌ಗೆ ಬಿ.ಡಿ.ಎ. ನವರ ಲೀಸ್ ಬಾಡಿಗೆ ದರಕ್ಕೆ ಹೋಲಿಸಿದಲ್ಲಿ ಕಡಿಮೆ ಲೀಸ್ ಬಾಡಿಗೆ ನಿಗದಿಪಡಿಸಿ ನಷ್ಟ ಉಂಟು ಮಾಡಿರುವುದು	2,03,54,000.00

ವರ್ಷ	ಆರೋಪಿತರ ಹೆಸರು	ಆರೋಪ	ಒಳಗೊಂಡ ಮೊತ್ತ (ರೂ.ಗಳಲ್ಲಿ)
	ದಿನಾಂಕ: 27.5.2004ರ ಆಡಳಿತ ಮಂಡಳಿಯ ಸಭೆಯಲ್ಲಿ ಹಾಜರಿದ್ದ ಅಧ್ಯಕ್ಷರು, ನಿರ್ದೇಶಕರು ಮತ್ತು ವ್ಯವಸ್ಥಾಪಕ ನಿರ್ದೇಶಕರು	2003–04ನೇ ಸಾಲಿನಲ್ಲಿ ಒಕ್ಕೂಟಗಳಿಂದ ಪಡೆದ ಹಾಲು ಸಂಗ್ರಹಣಾ ಶುಲ್ಕವನ್ನು ಒಕ್ಕೂಟಗಳಿಗೆ ಹಿಂದಿರುಗಿಸಿ ನಷ್ಟ ಉಂಟು ಮಾಡಿರುವುದು.	72,57,983.00
	ಶ್ರೀ ಸಿ. ಚನ್ನಕೃಷ್ಣಯ್ಯ, ಶ್ರೀ ವಿ. ರಾಜೇಶ್ವರಿ ಹಾಗೂ ಶ್ರೀ ಸಿ. ನಾಗೇಶ, ಮಾರುಕಟ್ಟೆ ವಿಭಾಗ	ದರನಿಗದಿ ಸಮಿತಿಯು ನಿಗದಿಪಡಿಸಿರುವ ದರಕ್ಕಿಂತ ಕಡಿಮೆ ದರದಲ್ಲಿ ಹಾಲಿನ ಪುಡಿ ಮತ್ತು ಬೆಣ್ಣೆಯನ್ನು ಖಾಸಗಿ ಸಂಸ್ಥೆಯವರಿಗೆ ಮಾರಾಟ ಮಾಡಿ ನಷ್ಟ ಉಂಟು ಮಾಡಿ ದುರುಪಯೋಗ ಪಡಿಸಿಕೊಂಡಿರುವುದು.	3,11,900.00

ವರ್ಷ	ಆರೋಪಿತರ ಹೆಸರು	ಆರೋಪ	ಒಳಗೊಂಡ ಮೊತ್ತ (ರೂ.ಗಳಲ್ಲಿ)
2005–06 ರಿಂದ 2006–07	ಅಂದಿನ ವ್ಯವಸ್ಥಾಪಕ ನಿರ್ದೇಶಕರು	ಗುಲ್ಬರ್ಗಾ ಹಾಲು ಒಕ್ಕೂಟದ ಅಧ್ಯಕ್ಷರಾದ ಶ್ರೀ ಸಿದ್ದನಗೌಡ ಮಲ್ಲನಹಳ್ಳಿ ವಡೇರ ಅವರ ವಿದೇಶ ಅಧ್ಯಯನ ಪ್ರವಾಸದ ಶೇ. 25ರ ಬದಲಾಗಿ ಪೂರ್ಣ ವೆಚ್ಚವನ್ನು ಭರಿಸಿ ನಷ್ಟ ಉಂಟು ಮಾಡಿರುವುದು.	1,27,500.00
	ಅಂದಿನ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಆಡಳಿತ ಮಂಡಳಿ ಸದಸ್ಯರು	ಕೋರಮಂಗಲದಲ್ಲಿರುವ ಸಂಸ್ಥೆಯ ಜಮೀನಿನಲ್ಲಿ ನಿಯಮಬಾಹಿರವಾಗಿ ಕಾರ್ಪೊರೇಟ್ ಕಟ್ಟಡಗಳನ್ನು ನಿರ್ಮಿಸಲು ಮಾಡಿದ ವೆಚ್ಚವನ್ನು ನಷ್ಟಕ್ಕೆ ವರ್ಗಾಯಿಸಿರುವುದು	49,04,416.13

ವರ್ಷ	ಆರೋಪಿತರ ಹೆಸರು	ಆರೋಪ	ಒಳಗೊಂಡ ಮೊತ್ತ (ರೂ.ಗಳಲ್ಲಿ)
	ಅಂದಿನ ವ್ಯವಸ್ಥಾಪಕ ನಿರ್ದೇಶಕರು	ಕೇಂದ್ರೀಯ ತರಬೇತಿ ಕೇಂದ್ರದಲ್ಲಿ ಊಟದ ಮನೆ ನಿರ್ಮಾಣಕ್ಕಾಗಿ ಆಡಳಿತ ಮಂಡಳಿ ಅನುಮೋದನೆ ಇಲ್ಲದೆ ಹೆಚ್ಚುವರಿ ಮೊತ್ತದ ಬಿಲ್ಲನ್ನು ಪಾವತಿಸಿ ನಷ್ಟ ಉಂಟು ಮಾಡಿರುವುದು.	2,34,661.00
	ಅಂದಿನ ವ್ಯವಸ್ಥಾಪಕ ನಿರ್ದೇಶಕರು	ಗುಬ್ಬಿ ಪಶು ಆಹಾರ ಘಟಕದಲ್ಲಿ ಗೋದಾಮು ನಿರ್ಮಾಣ ಮಾಡುವ ಕಾರ್ಯದಲ್ಲಿ ಟೆಂಡರ್ ಮೊತ್ತಕ್ಕಿಂತ ಅಧಿಕ ಮೊತ್ತವನ್ನು ಆಡಳಿತ ಮಂಡಳಿ ಅನುಮೋದನೆ ಪಡೆಯದೆ ಪಾವತಿಸಿ ನಷ್ಟ ಉಂಟು ಮಾಡಿರುವುದು.	8,63,454.00

ವರ್ಷ	ಆರೋಪಿತರ ಹೆಸರು	ಆರೋಪ	ಒಳಗೊಂಡ ಮೊತ್ತ (ರೂ.ಗಳಲ್ಲಿ)
	ಅಂದಿನ ವ್ಯವಸ್ಥಾಪಕ ನಿರ್ದೇಶಕರು	ಧಾರವಾಡ ಪಶು ಆಹಾರ ಘಟಕದಲ್ಲಿ ಗೋದಾಮು ನಿರ್ಮಾಣ ಮಾಡುವ ಕಾರ್ಯದಲ್ಲಿ ಟೆಂಡರ್ ಮೊತ್ತಕ್ಕಿಂತ ಅಧಿಕ ಮೊತ್ತವನ್ನು ಆಡಳಿತ ಮಂಡಳಿ ಅನುಮೋದನೆ ಪಡೆಯದೆ ಪಾವತಿಸಿ ನಷ್ಟ ಉಂಟು ಮಾಡಿರುವ ಬಗ್ಗೆ.	19,05,491.00
2007–08	ಶ್ರೀ ಐ.ಆರ್. ರಾಮಲಿಂಗೇಗೌಡ, ವ್ಯವಸ್ಥಾಪಕ ನಿರ್ದೇಶಕರು, ಆಡಳಿತ ಮಂಡಳಿಯ ನಿರ್ದೇಶಕರುಗಳಾದ 1. ಸಿ. ಮಂಜುನಾಥ 2. ಹಣವಂತ ಎ. ಹುದ್ದಾರ 3. ಆರ್.ಎಸ್. ಪಾಟೀಲ	ನೇರ ನೇಮಕಾತಿಯಲ್ಲಿ ಲಿಖಿತ ಪರೀಕ್ಷೆಗಾಗಿ ಪ್ರಶ್ನೆ ಪತ್ರಿಕೆ ಸಿದ್ಧಪಡಿಸಿರುವುದಕ್ಕೆ ಹಾಗೂ ಮೌಲ್ಯಮಾಪನಕ್ಕೆ ಅಧಿಕ ಮೊತ್ತವನ್ನು ಆಡಳಿತ ಮಂಡಳಿ ಅನುಮೋದನೆ ಪಡೆಯದೆ ಪಾವತಿಸಿ ನಷ್ಟ ಉಂಟು ಮಾಡಿರುವುದು.	68,000.00

ವರ್ಷ	ಆರೋಪಿತರ ಹೆಸರು	ಆರೋಪ	ಒಳಗೊಂಡ ಮೊತ್ತ (ರೂ.ಗಳಲ್ಲಿ)
	4. ಎ. ದಿವಾಕರ್ ಶೆಟ್ಟಿ 5. ಹೆಚ್.ಜಿ. ಹಿರೇಗೌಡ 6. ಎಸ್. ರಮೇಶ್ 7. ಮಾರುತಿ ಕೆಂಪಾರ ಜವರೇಗೌಡ 8. ಜಿ. ಜವರೇಗೌಡ 9. ಜಿ.ಪಿ. ರೇವಣ್ಣ ಸಿದ್ದಪ್ಪ 10. ಜಿ. ಸತ್ಯನಾರಾಯಣ 11. ಎ.ಟಿ. ಸೋಮಶೇಖರ್ 12. ಡಾ: ಎ. ರಾಜಗೋಪಾಲ್ ರವರುಗಳಿಂದ ತಲಾ ರೂ. 63,750.00 ವಸೂಲಿ ಮಾಡ ಬೇಕಾಗಿರುತ್ತದೆ.	ಆಡಳಿತ ಮಂಡಳಿ ಸದಸ್ಯರ ವಿದೇಶ ಅಧ್ಯಯನ ಪ್ರವಾಸಕ್ಕೆ ಒಟ್ಟು ರೂ. 34.10 ಲಕ್ಷ ಖರ್ಚು ಮಾಡಲಾಗಿದ್ದು, ಸದರಿ ವೆಚ್ಚದ ಶೇ. 25ರಷ್ಟನ್ನು ಆದ ತಲಾ ರೂ. 63,750.00ರಂತೆ ಒಟ್ಟು 12 ಜನ ನಿರ್ದೇಶಕರುಗಳಿಂದ ರೂ. 7.65 ಲಕ್ಷಗಳು ಸಂಸ್ಥೆಗೆ ಜಮಾ ಆಗಬೇಕಿದ್ದು, ಪೂರ್ಣ ವೆಚ್ಚವನ್ನು ಮಹಾಮಂಡಳವೇ ಭರಿಸಿ ನಷ್ಟ ಉಂಟು ಮಾಡಿರುವುದು.	7,65,000.00

ವರ್ಷ	ಆರೋಪಿತರ ಹೆಸರು	ಆರೋಪ	ಒಳಗೊಂಡ ಮೊತ್ತ (ರೂ.ಗಳಲ್ಲಿ)
ಮೇಲಿನ ಆರ್ಥಿಕ ನಷ್ಟ, ದುರುಪಯೋಗ ಮತ್ತು ಅವ್ಯವಹಾರಗಳಲ್ಲದೆ ಸಿಬ್ಬಂದಿ ನೇಮಕಾತಿ ಮತ್ತು ಪದೋನ್ನತಿಯಲ್ಲಿ ನಿಯಮಗಳ ಉಲ್ಲಂಘನೆ, ಪಾರದರ್ಶಕ ಕಾಯ್ದೆ ಉಲ್ಲಂಘನೆ ಇತ್ಯಾದಿ ಅನೇಕ ಆಡಳಿತಾತ್ಮಕ ಹಾಗೂ ಕಡಿಮೆ ಸವಕಳಿ ತೆಗೆದು ಲಾಭವನ್ನು ಹೆಚ್ಚಿಸಿರುವುದು, ಶಿಕ್ಷಣ ನಿಧಿಯನ್ನು ಕಡಿಮೆ ತೆಗೆದಿರಿಸಿರುವುದು ಇತ್ಯಾದಿ ಲೆಕ್ಕ ನಿರ್ವಹಣೆಗೆ ಸಂಬಂಧಪಟ್ಟ ಲೋಪದೋಷಗಳನ್ನು ಮರುಪರಿಶೀಲನಾ ವರದಿಗಳಲ್ಲಿ ತಿಳಿಸಲಾಗಿರುತ್ತದೆ.			

ಇ) ದಿನಾಂಕ: 20.1.2011ರಂದು ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕರು ಕೆ.ಎಂ.ಎಫ್.ನ ವ್ಯವಸ್ಥಾಪಕ ನಿರ್ದೇಶಕರಿಗೆ ಪತ್ರ ಬರೆದು ಮರುಪರಿಶೀಲನಾ ವರದಿಗಳಲ್ಲಿ ಗಮನಿಸಿರುವ ನ್ಯೂನ್ಯತೆಗಳಿಗೆ ಸಂಬಂಧಿಸಿದಂತೆ ಸೂಕ್ತ ನಮೂದುಗಳನ್ನು ಸಂಸ್ಥೆಯ ಲೆಕ್ಕ ಪುಸ್ತಕಗಳಲ್ಲಿ ದಾಖಲಿಸುವುದರೊಂದಿಗೆ ಮುಂದಿನ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ಅಳವಡಿಕೆಯಾಗುವಂತೆ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಸನ್ಮಾನ್ಯ ಅಧ್ಯಕ್ಷರೆ, ಉತ್ತರ ಒದಗಿಸಿದ್ದಾರೆ. ದಿನಾಂಕ: 11-01-2011 ರಂದು ಮಾನ್ಯ ಮುಖ್ಯ ಮಂತ್ರಿಗಳು ಸದನದಲ್ಲಿ ಕೆ.ಎಂ.ಎಫ್.ಗೆ ಸಂಬಂಧಪಟ್ಟಂತೆ 300-400 ಕೋಟಿ ರೂಪಾಯಿಗಳ ಅವ್ಯವಹಾರ ನಡೆದಿದೆ ಎಂದು ಹೇಳಿರುವುದು ನಿಜವಲ್ಲವೆ? ಎಂದು ಕೇಳಿದ್ದೆ. ಅದಕ್ಕೆ ಅವರು ನಿಜ ಎಂದು ಒಪ್ಪಿಕೊಂಡಿದ್ದಾರೆ.

(ಈ ಹಂತದಲ್ಲಿ ಸನ್ಮಾನ್ಯ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಆದರೆ, ಇಲ್ಲಿ ಬಾಕಿ ಪ್ರಶ್ನೆಗಳನ್ನು ಕೇಳಿದಂಥ ಸಂದರ್ಭದಲ್ಲಿ ಯಾರ್ಯಾರ ಮೇಲೆ ಚಾರ್ಜ್‌ಶೀಟ್ ಇದೆ? ಯಾರ್ಯಾರು ಏನೇನು ಮಾಡಿದ್ದಾರೆಂದು ಸವಿಸ್ತಾರವಾಗಿ ಕೇಳಿದ್ದೆ. ಅದಕ್ಕೆ ಯಾರ್ಯಾರು ಇದಕ್ಕೆ ಭಾಗಿಗಳೆನ್ನುವುದನ್ನು ಸ್ಪಷ್ಟವಾದಂಥ ಉತ್ತರ ಕೊಟ್ಟಿದ್ದಾರೆ. ಅದರಲ್ಲಿ ಆಡಳಿತ ಮಂಡಳಿ ಮತ್ತು ಅವತ್ತಿನ ವ್ಯವಸ್ಥಾಪಕ ನಿರ್ದೇಶಕರು ರೈತರಿಗೋಸ್ಕರ ರೈತರ ಕಲ್ಯಾಣ ಟ್ರಸ್ಟ್‌ನ್ನು ಸ್ಥಾಪಿಸುವ ನಿರ್ಣಯ ಮಾಡಿದ್ದರು. ಆ ಸ್ಥಾಪನೆಗೆ ಕೆ.ಎಂ.ಎಫ್.ನಿಂದ ಹಣವನ್ನು ಬಿಡುಗಡೆ ಮಾಡಿರುವುದು ಬೈಲಾದೊಳಗೆ ಇಲ್ಲ, ಕಾನೂನು ಬಾಹಿರವಾಗಿದೆ ಎನ್ನುವ ವಿಚಾರ ಏನು ಪ್ರಸ್ತಾಪಿಸಿದ್ದಾರೆ. ರೈತರ ಕಲ್ಯಾಣ ಟ್ರಸ್ಟ್ ಅನ್ನು ಸ್ಥಾಪನೆ ಮಾಡಿರುವುದು ರೈತರ ಹೆಣ್ಣು ಮಕ್ಕಳಿಗೋಸ್ಕರ. ಯಾವ ರೈತ ಹಾಲನ್ನು ಶೇಖರಣೆ ಮಾಡಿ ಈ ರಾಜ್ಯದ ಜನತೆಗೆ ಕೊಡುತ್ತಾನೆ ಅಂಥ ರೈತನ ಹೆಣ್ಣುಮಗಳು ಇಲ್ಲಿ ಬಂದು ಉಳಿಯುವುದಕೋಸ್ಕರವಾಗಿ ರೈತರ ಕಲ್ಯಾಣ ಟ್ರಸ್ಟ್‌ನ್ನು ಸ್ಥಾಪನೆ ಮಾಡಿರುವುದು. ಆ ಟ್ರಸ್ಟ್‌ನ್ನು ರಚಿಸಬೇಕಾದರೆ ಯಾರು ಯಾವತ್ತಿನ ಕಾಲದಲ್ಲಿ ಯಾವ್ಯಾವ ಸಂದರ್ಭದಲ್ಲಿ ಅದರ ಅಧ್ಯಕ್ಷರಾಗಿರುತ್ತಾರೋ ಅವರೇ ಅಧ್ಯಕ್ಷರಾಗಿರತಕ್ಕಂಥದ್ದು. ಮತ್ತು ಕರ್ನಾಟಕ ರಾಜ್ಯದ ಎಲ್ಲಾ ಹದಿಮೂರು ಹಾಲು ಒಕ್ಕೂಟಗಳ ನಿರ್ದೇಶಕರು ಸದಸ್ಯರಾಗಿರತಕ್ಕಂಥದ್ದು, ಮತ್ತು ನಾಲ್ಕು ಕೋಟಿ ಇಪ್ಪತ್ತು ಲಕ್ಷ ರೂಪಾಯಿಗಳನ್ನು ಕೆ.ಎಂ.ಎಫ್.ನ ಮಹಾಮಂಡಳಿಯಿಂದ ಕೊಡತಕ್ಕಂಥದ್ದು, ಮತ್ತು ಇನ್ನುಳಿದಿರತಕ್ಕಂಥ

ಹಣವನ್ನು ಹದಿಮೂರು ಜಿಲ್ಲಾ ಹಾಲು ಉತ್ಪಾದಕರ ಮಹಾ ಮಂಡಳಗಳು ಕೊಡತಕ್ಕಂಥದ್ದು ಎಂದು ಒಂದು ನಿಬಂಧನೆಗೊಳಪಟ್ಟು ಒಂದು ಟ್ರಸ್ಟ್‌ನ್ನು ರಚಿಸುತ್ತಾರೆ. ಆ ಟ್ರಸ್ಟ್‌ನ್ನು ರಚನೆ ಮಾಡಿದ್ದರಿಂದ ಇವತ್ತು ಕರ್ನಾಟಕ ರಾಜ್ಯದಲ್ಲಿ ಒಂದು ಸಾವಿರ ಹೆಣ್ಣು ಮಕ್ಕಳು ಹೈಯರ್ ಎಜುಕೇಷನ್ ಮಾಡುವುದಕ್ಕೆ ಬಂದಂಥ ಸಂದರ್ಭದಲ್ಲಿ ಇಲ್ಲಿ ಉಳಿದುಕೊಳ್ಳುತ್ತಾರೆ. ಆ ರೈತಾಪಿ ಹೆಣ್ಣು ಮಕ್ಕಳಿಗೆ ಕಲ್ಯಾಣ ಟ್ರಸ್ಟ್ ಮಾಡಿದ್ದು ತಪ್ಪೆ ಎನ್ನತಕ್ಕಂಥ ವಿಚಾರವನ್ನು ಅವತ್ತೇನು ಈ ಒಂದು objection ಅನ್ನು ಮಹಾ ಲೆಕ್ಕ ಪರಿಶೋಧಕರು ಮಾಡಿದ್ದಾರೆ, ಅವತ್ತಿನ ದಿವಸ ಬಹುಶ: ಅಲ್ಲಿ ಕರ್ನಾಟಕ ರಾಜ್ಯದ ಸಹಕಾರ ಸಂಘದ ನಿಬಂಧಕರು ಕೂಡ ಅದಕ್ಕೆ ಸದಸ್ಯರಿರುತ್ತಾರೆ. ಅವತ್ತು ಅವರು ನಿಯಮಬಾಹಿರವಾಗಿ ನೀವು ತೀರ್ಮಾನ ತೆಗೆದುಕೊಳ್ಳುತ್ತಿದ್ದೀರಿ, ಇದು ಸರಿಯಲ್ಲ, ಈ ಟ್ರಸ್ಟ್‌ನ್ನು ಮಾಡುವುದಕ್ಕೆ ಬರುವುದಿಲ್ಲ, ಎನ್ನುವ ವಿಚಾರವನ್ನು ಪ್ರಸ್ತಾಪ ಮಾಡಬಹುದಾಗಿತ್ತಾ ಎನ್ನುವುದು ನನ್ನ ವಿಚಾರ.

ಉಪಾಧ್ಯಕ್ಷರು: ಶಿವಲಿಂಗೇಗೌಡರವರೆ, ತಾವು ಕ್ಲಾರಿಫಿಕೆಷನ್ ಕೇಳಿ.

ಶ್ರೀ ಹೆಚ್.ಡಿ. ರೇವಣ್ಣ: ಸನ್ಮಾನ್ಯ ಮುಖ್ಯಮಂತ್ರಿಗಳು 11-01-2011 ರಲ್ಲಿ ಹೇಳಿರುವುದು ಸದನದ ರೆಕಾರ್ಡ್‌ನಲ್ಲಿದೆ. ಸದನದ ರೆಕಾರ್ಡ್‌ಗೆ ಹೋದಾಗ ನಾಳೆ ನನ್ನ ಮೇಲೆ ಅಪಾದನೆ ಮಾಡುವಾಗ ನೋಟಿಸ್ ಕೊಡಬೇಕಾಗಿತ್ತು ನೋಟಿಸ್ ಕೊಟ್ಟಿಲ್ಲ. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಸಹಕಾರ ಸಚಿವರಿಗೆ ಮನವಿ ಮಾಡುವುದಿಷ್ಟೆ. 11-4ರಲ್ಲಿ ಮುಖ್ಯಮಂತ್ರಿಗಳ ಹೇಳಿಕೆ. ಕೆ.ಎಂ.ಎಫ್. ಮುಳುಗಿಸಿರುವುದಕ್ಕೆ 300-400 ಕೋಟಿ ಚಾರ್ಜ್‌ಸ್ ಇವರ ಮೇಲೆ ಇದೆ. ಅದರ ಮೇಲೆ ಪ್ರಶ್ನೆ ಹಾಕಿದ್ದಾರೆ.

ಶ್ರೀ ಎಸ್. ಸುರೇಶ್ ಕುಮಾರ್: ಮಾನ್ಯ ಉಪಾಧ್ಯಕ್ಷರೆ, ತಮಗೆ ಏನಾದರೂ ಅನಿಸಿದರೆ ಬೇರೆ ರೂಪಕ್ಕೆ ಇದನ್ನು ಕನ್‌ವರ್ಟ್ ಮಾಡಿ.

ಪ್ರಶ್ನೋತ್ತರ ವೇಳೆಯಲ್ಲಿ ಇದೇನಿದು? ಪ್ರಶ್ನೋತ್ತರ ವೇಳೆಯಲ್ಲೂ ಕೂಡ ಅರ್ಧಗಂಟೆ ಕಾಲ ಚರ್ಚೆಯಾದರೆ ಏನು?

ಉಪಾಧ್ಯಕ್ಷರು: ರೇವಣ್ಣನವರೆ, ಇಲ್ಲಿ ಕ್ಲಾರಿಫಿಕೇಷನ್ ಮಾತ್ರ ಕೇಳಬೇಕು.

ಶ್ರೀ ಹೆಚ್.ಡಿ. ರೇವಣ್ಣ: ಸಾರ್ ದಯಮಾಡಿ ನಾನು ಹೇಳುವವರೆಗೆ ಎರಡು ನಿಮಿಷ ಅವಕಾಶ ಮಾಡಿಕೊಡಿ.

ಉಪಾಧ್ಯಕ್ಷರು: ಇಲ್ಲ, ಇಲ್ಲ ಇಲ್ಲಿ ಕ್ಲಾರಿಫಿಕೇಷನ್ ಕೇಳಿ.

ಶ್ರೀ ಹೆಚ್.ಡಿ. ರೇವಣ್ಣ: ಏಕೆ ಹೆದರಬೇಕು? ಪ್ರಾಮಾಣಿಕವಾಗಿದ್ದರೆ ಏಕೆ ಹೆದರಬೇಕು?

ಶ್ರೀ ಎಸ್. ಸುರೇಶ್ ಕುಮಾರ್ : ಪ್ರಶ್ನೆಯೇ ಮುಗಿದಿಲ್ಲ ಇನ್ನು ಉಪ ಪ್ರಶ್ನೆ ಹೇಗೆ?

ಶ್ರೀ ಹೆಚ್.ಡಿ. ರೇವಣ್ಣ: ಪೇಪರ್‌ನಲ್ಲಿ ಬರೆಸುತ್ತೀರಿ, ಇಲ್ಲಿ ಏಕೆ ಹೀಗೆ?

ಉಪಾಧ್ಯಕ್ಷರು: ನೀವು ಬೇರೆ ರೂಪದಲ್ಲಿ ತಂದು ಸಮಗ್ರವಾಗಿ ಚರ್ಚೆ ಮಾಡಿ. ಇಲ್ಲಿ ಕೇವಲ ಪ್ರಶ್ನೆಗೆ ಉಪ ಪ್ರಶ್ನೆಯಷ್ಟೆ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ. ರೇವಣ್ಣ: ಇಲ್ಲಿ ರಿಜಿಸ್ಟ್ರಾರ್‌ರವರು ಒಂದು ಉತ್ತರ ಕೊಡುತ್ತಿದ್ದಾರೆ. ತಮಗೆ ರಿಜಿಸ್ಟ್ರಾರ್ ಆಫೀಸ್‌ನಿಂದ ಮತ್ತು ಪ್ರಧಾನ ಕಾರ್ಯದರ್ಶಿಗಳ ಆಫೀಸ್‌ನಿಂದ ಬಂದಿರುವ ಎರಡನ್ನೂ ತಮಗೆ ಕಳುಹಿಸುತ್ತೇನೆ. ಅಲ್ಲಿ ಅವರೇನು ಹೇಳುತ್ತಾರೆ, 300 ಕೋಟಿದು ಅವ್ಯವಹಾರ ಆಗಿಲ್ಲ, ಏನೂ ಇಲ್ಲ ಎಂದು ಅವರು ಬರೆಯುತ್ತಾರೆ. ಇದರಲ್ಲಿ ಸೆಕ್ರೆಟರಿಯಿಂದ ನಿಜವೆಂದು ಬರೆಯುತ್ತಾರೆ. ಎರಡೂ ಕಾಪಿಯಿದೆ. ಎರಡೆನ್ನೂ

ಕಳುಹಿಸಿ ಕೊಡುತ್ತೇನೆ. ಆಮೇಲೆ ನನ್ನ ಮೇಲೆ ಏನಾದರೂ 11–4ರಲ್ಲಿ ಒಂದು ರೂಪಾಯಿ ಏನಾದರೂ ಆರೋಪವಿದ್ದರೆ, ಈಗ ತಾವು ಡೆಂಪೋ ಡೈರಿಯದನ್ನು ಬರೆದಿದ್ದೀರಿ. ಡೆಂಪೋ ಡೈರಿಗೆ ನಾನು ಅಧ್ಯಕ್ಷ ಇದ್ದೇನೆಯೆ? ಡೆಂಪೋ ಡೈರಿ ಅಧ್ಯಕ್ಷ ಇರುವವರು ಎಂ.ಡಿ. ಅದು ಮಿಲಿಟರಿಯಿಂದ ಬಂದಿರುವುದು. ಅದನ್ನು ನೀವು ಅಡಿಟ್ ಮಾಡುವುದಕ್ಕೆ ಅವಕಾಶವಿಲ್ಲ. ಸೂಚನೆ ಕೊಟ್ಟು ಅದನ್ನೂ ಅಡಿಟ್ ಮಾಡಿಸಿದ್ದೀರಿ.

ಉಪಾಧ್ಯಕ್ಷರು: ರೇವಣ್ಣನವರೆ ಕುಳಿತುಕೊಳ್ಳಿ, ಶಿವಲಿಂಗೇಗೌಡರವರೆ ಕುಳಿತುಕೊಳ್ಳಿ. ಮಂತ್ರಿಗಳು ಉತ್ತರಿಸಿ. ಅವರ ಉತ್ತರ ಮಾಡಿದ ಮೇಲೆ ಕ್ಲಾರಿಫಿಕೇಷನ್ ಕೇಳಿ.

ಶ್ರೀ ಲಕ್ಷ್ಮಣ ಸ. ಸವದಿ: ಮಾನ್ಯ ಉಪಾಧ್ಯಕ್ಷರೆ, ಸನ್ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ರೇವಣ್ಣನವರ ಮೇಲೆ 300 ನಿಂದ 400 ಕೋಟಿ ರೂಪಾಯಿ ಅವ್ಯವಹಾರವಾಗಿದೆ ಎಂದು ಹೇಳಿಲ್ಲ. ತಾವು ಏಕೆ ಹಾಗೆ ಮಾಡುತ್ತೀರಿ, ನಾನು ನಿಮಗೆ ಕಡತ ಕೊಡುತ್ತೇನೆ. ನಾನು ಮಾತನಾಡುವವರೆಗೂ ತಾವು ಸ್ವಲ್ಪ ತಾಳಿ. ಸನ್ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದ್ದಾರೆಂದರೆ, ಕೆ.ಎಂ.ಎಫ್. ಅಲ್ಲಿರತಕ್ಕಂಥ ಆಡಳಿತ ಮಂಡಳಿಯ ಮೇಲೆ, ಅವರು ಸ್ಪೆಸಿಪಿಕ್ ಆಗಿ ರೇವಣ್ಣನವರ ಹೆಸರು ತೆಗೆದುಕೊಂಡಿಲ್ಲ. ಸ್ವಲ್ಪ ತಾಳಿ ರೇವಣ್ಣನವರೆ, ಏಕೆ ಹೀಗೆ ಮಾಡುತ್ತೀರಿ? ನಾನು ಮುಗಿಸುತ್ತೇನೆ. ದೇವರು ನಿಮಗೆ ಎಲ್ಲಾ ಕೊಟ್ಟಿದ್ದಾನೆ ಸಮಾಧಾನ ಒಂದನ್ನು ಕೊಡಲಿಲ್ಲ ಏಕೆ ಅಂತ? ಮುಖ್ಯಮಂತ್ರಿಗಳು ಹೇಳಿರುವಂಥದ್ದು ಈ ಕೆ.ಎಂ.ಎಫ್.ನಲ್ಲಿ 300 ರಿಂದ 400 ಕೋಟಿ ರೂಪಾಯಿಗಳ ಅವ್ಯವಹಾರವಾಗಿರುವಂಥ ವರ್ತಮಾನವಿದೆ, ಸುದ್ದಿಯಿದೆ, ಆರೋಪವಿದೆ ಎನ್ನತಕ್ಕಂಥದ್ದು ಹೇಳಿದ್ದಾರೆ. ಸ್ಪೆಸಿಪಿಕ್ ಆಗಿ ರೇವಣ್ಣನವರಾಗಲಿ ಅಥವಾ ಆಡಳಿತ ಮಂಡಳಿಯವರು ಅವ್ಯವಹಾರ ಮಾಡಿದ್ದಾರೆನ್ನುವುದು ಇಲ್ಲಿ ಬಂದಿಲ್ಲ. ಅವರು ರಾಜ್ಯದ ಮುಖ್ಯಮಂತ್ರಿಗಳು. ಅನೇಕ ಮೂಲಗಳಿಂದ ಅವರಿಗೆ ಮಾಹಿತಿ

ಬರುತ್ತಿರುತ್ತವೆ. ಇಂಟೆಲಿಜೆನ್ಸಿಯಿಂದ ಮಾಹಿತಿ ಬರಬಹುದು. ಮಾಧ್ಯಮದ ಸ್ನೇಹಿತರ ಮೂಲಕ ಬರಬಹುದು. ಸಾರ್ವಜನಿಕರಿಂದ ದೂರು ಬರಬಹುದು.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಇಡೀ ಸದನ ನೋಡಿದೆ. ಅವತ್ತು ಏನು ಹೇಳಿದರು, ನಿಮ್ಮ ಅಪ್ಪ ಮಕ್ಕಳದು ಇಲ್ಲಿ ಇದೆ ಎಂದು ಸೂಟ್‌ಕೇಸ್ ತೋರಿಸಿದಿರಿ.

ಉಪಾಧ್ಯಕ್ಷರು: ಶಿವಲಿಂಗೇಗೌಡರವರೆ, ತಾವು ಕುಳಿತುಕೊಳ್ಳಿ.

ಶ್ರೀ ಲಕ್ಷ್ಮಣ ಸ. ಸವದಿ: ನೀವು ಕಡತ ತೆಗೆಸಿ ನಾನು ಸೃಷ್ಟಿ ಮಾಡಿದ್ದಲ್ಲ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಕಡತ ತೆಗೆಸಿ. ಏನು ಮಾತನಾಡಿದ್ದಾರೆಂದು ಅದರಲ್ಲಿದೆ.

ಶ್ರೀ ಲಕ್ಷ್ಮಣ ಸ. ಸವದಿ: ನಾನು ಕಡತವನ್ನು ತೆಗೆಸಿದ್ದೇನೆ. ಆ ಕಡತದಲ್ಲಿರುವುದು ತಮಗೆ ಸ್ಪಷ್ಟವಾಗಿ ಗೋಚರಿಸುತ್ತದೆ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಮುಖ್ಯಮಂತ್ರಿಯವರು ಹೇಳಿಕೆ ಕೊಟ್ಟಿರುವುದನ್ನು ಈ ಸಂದರ್ಭದಲ್ಲಿ ಓದುತ್ತೇನೆ. ಅದೇನೆಂದರೆ, ಸನ್ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪರವರು ಕೆ.ಎಂ.ಎಫ್.ನ್ನು ಮುಳುಗಿಸಿರುವುದಕ್ಕೆ ಸಂಬಂಧಪಟ್ಟಂತೆ 300 ರಿಂದ 400 ಕೋಟಿ ರೂಪಾಯಿಗಳ ಚಾರ್ಜಸ್ ಇವರ ಮೇಲೆ ಇದೆ. ಮೈಸೂರಿನಲ್ಲಿರುವ ಸೈಟ್‌ಗಳನ್ನು ಇಡೀ ದೇಶಕ್ಕೆ ಹಂಚಬಹುದೆಂದು ಹೇಳಿದ್ದಾರೆ. ಇಡೀ ದೇಶಕ್ಕೆ ಹಂಚುವಷ್ಟು ಸೈಟ್‌ಗಳು ನನ್ನ ಹತ್ತಿರ ಇದ್ದರೆ ಅದನ್ನು ಸಹ ವಾಪಸ್ಸು ತೆಗೆದುಕೊಳ್ಳಿ. ಮತ್ತೆ ಇದರಲ್ಲಿ 12 ಕೋಟಿ ರೂಪಾಯಿ ಚಾರ್ಜಸ್ ಬಗ್ಗೆ ಹೇಳಿದ್ದಾರೆ. ಈ 12 ಕೋಟಿ ರೂಪಾಯಿ ಯಾವುದೆಂದರೆ, ಬೆಂಗಳೂರಿನ ನಾಗಶೆಟ್ಟಿ ಹಳ್ಳಿ ಹತ್ತಿರ 5 ಎಕರೆ ಜಮೀನಿಗೆ ಯಾರೋ ಬೇಲಿ ಹಾಕುತ್ತಿದ್ದರು. ಈ ವಿಚಾರ ಮಾನ್ಯ ಡಿ.ಕೆ. ಶಿವಕುಮಾರ್‌ರವರಿಗೂ ಸಹ ಗೊತ್ತಿದೆ. ನಾನು ಅಲ್ಲಿ 40 ಎಕರೆ

ಜಮೀನು ಉಳಿಸಿಕೊಟ್ಟಿರುವುದು ತಪ್ಪೆ? 5 ಎಕರೆ ಜಮೀನಿನಲ್ಲಿ 1 ಸಾವಿರ ಹೆಣ್ಣು ಮಕ್ಕಳು ಇಡೀ ರಾಜ್ಯದಿಂದ ಇಲ್ಲಿಗೆ ಬಂದು ಬಿ.ಎಸ್.ಸಿ., ಬಿಕಾಂ., ಬಿ.ಇ., ಎಂ.ಬಿ.ಬಿ.ಎಸ್., ವಿದ್ಯಾಭ್ಯಾಸ ಮಾಡುವುದಕ್ಕಾಗಿ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಕಟ್ಟಡವನ್ನು ಕಟ್ಟಲಾಗಿದೆ. ಇದಕ್ಕೆ ಪರ್ಮಿಷನ್ ಬೇಕಾಗಿಲ್ಲ, ಬೈಲಾದಲ್ಲಿದೆ ಎಂದು ರಿಜಿಸ್ಟ್ರಾರ್‌ರವರು ಸಭೆಯಲ್ಲಿ ಹೇಳಿದ್ದರು. ಆಗ ಅದಕ್ಕೆ ನಾನು ಅಧ್ಯಕ್ಷ ಆಗಿದ್ದೇನೆ? ಪ್ರತಿ ವರ್ಷ ಯಾರು ಅಧ್ಯಕ್ಷರಿರುತ್ತಾರೆಯೋ ಅವರು ಅದರ ಸದಸ್ಯರಾಗಿರುತ್ತಾರೆ. ಬೇಕಾದರೆ ಕಡತವನ್ನು ತೆಗೆಸಿ ನೋಡಿ. ನಾನೇನು ಅಲ್ಲಿರುವುದಿಲ್ಲ. ಒಂದು ಸಾವಿರ ಬಡ ಮಕ್ಕಳಿಗೋಸ್ಕರ ಒಂದು ಬಿಲ್ಡಿಂಗ್ ಕಟ್ಟಿರುವುದು ತಪ್ಪೇ? ಇದಕ್ಕೆ ಪರ್ಮಿಷನ್‌ನ್ನು ರಿಜಿಸ್ಟ್ರಾರ್‌ರವರೇ ಕೊಟ್ಟಿದ್ದಾರೆ. ಬೇಕಾದರೆ ಇದರ ಒಂದು ಪ್ರತಿಯನ್ನು ತಮಗೆ ಕಳುಹಿಸಿಕೊಡುತ್ತೇನೆ. ರೇವಣ್ಣ 12 ಕೋಟಿ ರೂಪಾಯಿ ಅವ್ಯವಹಾರ ಮಾಡಿದ್ದಾರೆಂದು ಹೇಳುತ್ತಿದ್ದೀರಿ. ಬರೆಯಬೇಕಾಗಿತ್ತೆಂದು ಡೈರೆಕ್ಟರ್‌ರವರು ಹೇಳಿದರೆಂದು ಆಡಿಟರ್‌ರವರು ಹೇಳುತ್ತಾರೆ. ಇದು ಬಿಟ್ಟರೆ ಡೆಂಪೋ ಡೈರಿಗೆ ಸಂಬಂಧಪಟ್ಟದ್ದು ಇದೆ. ಆದರೆ, ಇದು ಕೆ.ಎಂ.ಎಫ್.ಗೆ ಸಂಬಂಧಪಟ್ಟಿಲ್ಲ. ಆದರೆ, ತಾವು ಮಾಹಿತಿಯಲ್ಲಿ ಡೆಂಪೋ ಡೈರಿಯದು ಸಹ ಕೊಟ್ಟಿದ್ದೀರಿ. ಡೆಂಪೋ ನನ್ನ ವ್ಯಾಪ್ತಿಗೆ ಬರುವುದಿಲ್ಲ. ಮತ್ತೆ ಇದರ ಅಧ್ಯಕ್ಷ ಕೂಡ ನಾನು ಆಗಿರಲಿಲ್ಲ. ಡೆಂಪೋ ಡೈರಿಯ ಎಂ.ಡಿ.ಯವರು ಇದರ ಅಧ್ಯಕ್ಷರಾಗಿರುತ್ತಾರೆ. ಇದು ಮಿಲಿಟರಿಯಿಂದ ಬಂದಿದೆ. ಬೇಕಾದರೆ ಮಾನ್ಯ ಮುಖ್ಯಮಂತ್ರಿಯವರು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರನ್ನು ಕರೆಸಿ ಚರ್ಚೆ ಮಾಡಿ. ನಾನೇನಾದರೂ ಕೆ.ಎಂ.ಎಫ್.ನಲ್ಲಿ ಒಂದು ರೂಪಾಯಿ ತಿಂದಿದ್ದೇನೆಂದರೆ, ಈ ಸ್ಥಾನದಿಂದ ನಾನು 5 ನಿಮಿಷದಲ್ಲಿ ಹೊರಟು ಹೋಗುತ್ತೇನೆ. ಮತ್ತೆ 56 ಕೋಟಿ ರೂಪಾಯಿ ಬಗ್ಗೆ ಅಪೀಲ್ ಹಾಕಿದ್ದೇನೆ. ಮಾನ್ಯ ಧರ್ಮಸಿಂಗ್‌ರವರ ಕಾಲದಲ್ಲಿ ಇದನ್ನು ವಜಾ ಮಾಡಿಸಿದ್ದೀರೆಂದು ಹೇಳಿದ್ದೀರಿ. ಆಗ ನಾನು ಅದರ ಬಗ್ಗೆ ಅಪೀಲ್

ಹಾಕಿರಲಿಲ್ಲವೆಂದು ವಿಷಯವನ್ನು ಈ ಸಭೆಯ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ.

ಉಪಾಧ್ಯಕ್ಷರು: ಮಾನ್ಯ ರೇವಣ್ಣರವರೆ, ತಾವು ಕ್ಲಾರಿಫಿಕೇಷನ್ ಕೇಳಿದ್ದೀರಿ. ಇದಕ್ಕೆ ಮಾನ್ಯ ಸಚಿವರು ಉತ್ತರ ಕೊಡುತ್ತಾರೆ.

ಶ್ರೀ ಲಕ್ಷ್ಮಣ ಸ. ಸವದಿ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರುವಂಥ ಪ್ರಶ್ನೆಗಳಿಗೆ ಮತ್ತೆ ಅವರು ಏನಾದರೂ ಕ್ಲಾರಿಫಿಕೇಷನ್ ಕೇಳಿದರೆ ಅದಕ್ಕೆ ಉತ್ತರ ಕೊಡುವುದಕ್ಕೆ ನಾನು ಸಿದ್ದನಿದ್ದೇನೆ. ಅವರಿಗೆ ಇದರ ಬಗ್ಗೆ ಹೆಚ್ಚಿನ ಚರ್ಚೆ ಬೇಕಾದರೆ, ಬೇರೊಂದು ನಿಯಮಾವಳಿಯಲ್ಲಿ ತಂದರೆ ತಾವು ಚರ್ಚೆಗೆ ಅವಕಾಶ ಮಾಡಿಕೊಡಿ. ಕೆ.ಎಂ.ಎಫ್.ಗೋಸ್ಕರ ಒಂದು ದಿವಸ ಸಂಪೂರ್ಣವಾಗಿ ಚರ್ಚೆ ಮಾಡೋಣ. ಅವರು ಏನು ಡಿಫೆಂಡ್ ಮಾಡಿಕೊಳ್ಳುತ್ತಾರೋ ಅದನ್ನು ಮಾಡಲಿ. ಅವರು ನನ್ನ ಹತ್ತಿರ ಏನು ಕ್ಲಾರಿಫಿಕೇಷನ್ ಬೇಕೋ ಅದಕ್ಕೆ ನಾನು ಉತ್ತರ ಕೊಡುತ್ತೇನೆ. ಮತ್ತೆ ಅವರು ಮಾಡಿರುವ ಅವ್ಯವಹಾರದ ಬಗ್ಗೆ ಏನು ಸಮರ್ಥನೆ ಮಾಡಿಕೊಳ್ಳುತ್ತಾರೋ ಮಾಡಿಕೊಳ್ಳಲಿ ಮತ್ತೆ ನಾವು ಮಾಡಿರುವ ಬಗ್ಗೆ ಅಂದರೆ, ಸರ್ಕಾರ ಪರಿಶೀಲನೆ ಮಾಡಿರತಕ್ಕಂಥದ್ದರ ಬಗ್ಗೆ ಸಂಪೂರ್ಣವಾಗಿ ಚರ್ಚೆ ಮಾಡೋಣ. ನಾನು ತಮ್ಮ ಮೂಲಕ ಅವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಇದರ ಬಗ್ಗೆ ಪ್ರತ್ಯೇಕವಾಗಿ ಒಂದು ನಿಯಮಾವಳಿ ಅಡಿಯಲ್ಲಿ ತಂದು ಚರ್ಚೆಗೆ ಬನ್ನಿ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಉಪಾಧ್ಯಕ್ಷರೆ, ಇದರಲ್ಲಿ ಮಾನ್ಯ ಸಚಿವರೆ ಉತ್ತರ ಕೊಟ್ಟಿದ್ದಾರೆ.

ಶ್ರೀ ಲಕ್ಷ್ಮಣ ಸ. ಸವದಿ: ಉತ್ತರವನ್ನು ನಾನೇ ಕೊಟ್ಟಿದ್ದೇನೆ.

ಶ್ರೀ ಹೆಚ್.ಡಿ. ರೇವಣ್ಣ: ಡೆಂಪೋ ಡೈರಿ ಕೆ.ಎಂ.ಎಫ್.ಗೆ ಬರುತ್ತದೆಯೋ ಅಥವಾ ಇಲ್ಲವೋ ಹೇಳಿ? .. ಇದರಲ್ಲಿ ನಾನು ಭಾಗಿಯಾಗಿದ್ದೇನೆಯೇ ?

(ಗೊಂದಲ)

ಶ್ರೀ ಲಕ್ಷ್ಮಣ ಸ. ಸವದಿ: ನನ್ನ ಹತ್ತಿರ ಇರತಕ್ಕಂಥ ಮಾಹಿತಿಯ ಆಧಾರದ ಮೇಲೆ ನಾನು ಹೇಳಿದ್ದೇನೆ. ...

ಉಪಾಧ್ಯಕ್ಷರು: ಮಾನ್ಯ ರೇವಣ್ಣರವರೆ, ಸದರಿ ವಿಷಯದ ಬಗ್ಗೆ ಇಲ್ಲಿಗೆ ಚರ್ಚೆಯನ್ನು ಮುಗಿಸುತ್ತೇನೆ. ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: 400 ಕೋಟಿ ರೂಪಾಯಿದು ಅವ್ಯವಹಾರ ಆಗಿದ್ದರೆ ಹೇಳಲಿ?

ಡಾ: ಹೆಚ್.ಸಿ. ಮಹದೇವಪ್ಪ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ರೇವಣ್ಣರವರು ಹೇಳುವುದೇನೆಂದರೆ, ಕೆ.ಎಂ.ಎಫ್.ನಲ್ಲಿ 300–400 ಕೋಟಿ ರೂಪಾಯಿ ಅವ್ಯವಹಾರವಾಗಿದೆ ಎಂದು ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ. ಆದರೆ, ಅವರನ್ನು ಕುರಿತು ಮಾನ್ಯ ಮುಖ್ಯಮಂತ್ರಿಯವರು ಹೇಳಿಲ್ಲವೆಂದು ಮಾನ್ಯ ಸಚಿವರು ಸ್ಪಷ್ಟನೆ ಕೊಟ್ಟರು. ಆದರೆ, ಇದರಲ್ಲಿ ಹೇಳಿದ್ದಾರೆಂದು ಮಾನ್ಯ ರೇವಣ್ಣರವರು ಹೇಳಿದ್ದಾರೆ. ಆದ್ದರಿಂದ ಇವರು ಹೇಳುವುದು ಸರಿಯಿದೆಯೋ ಅಥವಾ ಅವರು ಹೇಳುವುದು ಸರಿಯಿದೆಯೋ ಎಂಬುದನ್ನು ತಾವು ಸರಿಯಾಗಿ ಹೇಳಬೇಕು. ಇದು ಬಹಳ ಮುಖ್ಯವಾದಂಥ ವಿಷಯವಾಗಿರುವುದರಿಂದ ಪ್ರಶ್ನೆಯನ್ನು ಹೊರತುಪಡಿಸಿ ಬೇರೆ ರೂಪದಲ್ಲಿ ತೆಗೆದುಕೊಳ್ಳುವುದಕ್ಕೆ ತಾವು ಒಂದು ನಿರ್ಧಾರವನ್ನು ಈಗ ಮಾಡಬೇಕು.

ಉಪಾಧ್ಯಕ್ಷರು: ಮಾನ್ಯ ರೇವಣ್ಣರವರೆ, ತಾವು ಕುಳಿತುಕೊಳ್ಳಿ. ಈಗ ಪ್ರಶ್ನೋತ್ತರವಾಗಿರುವುದರಿಂದ ಇದಕ್ಕೆ ಹೆಚ್ಚು ಸಮಯ ಕೊಡುವುದಕ್ಕೆ ಬರುವುದಿಲ್ಲ. ಇದನ್ನು ಬೇರೆ ರೂಪದಲ್ಲಿ ತೆಗೆದುಕೊಂಡು ಬನ್ನಿ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಉಪಾಧ್ಯಕ್ಷರೆ, ನಾನು ಬರುವುದಕ್ಕಿಂತ ಮುಂಚೆ 12 ಲಕ್ಷ ಲೀಟರ್ ಬರುತ್ತಿತ್ತು. ಈಗ 36 ಲಕ್ಷ ಲೀಟರ್‌ಗೆ ತೆಗೆದುಕೊಂಡು ಹೋಗಿದ್ದೇನೆ. 350 ಕೋಟಿ ರೂಪಾಯಿ ಟರ್ನ್ ಓವರ್ ಇದ್ದದ್ದನ್ನು 3,500 ಕೋಟಿ ರೂಪಾಯಿ ಟರ್ನ್ ಓವರ್‌ಗೆ ನಾನು ತೆಗೆದುಕೊಂಡು ಹೋಗಿದ್ದೇನೆ. ಆ ಸಂಸ್ಥೆಯಲ್ಲಿ ಮೊದಲು 7 ಕೋಟಿ ರೂಪಾಯಿ ನಷ್ಟ ಇತ್ತು. ನಾನು ಬೆಂಗಳೂರಿನಲ್ಲಿ ಎಷ್ಟು ಆಸ್ತಿಯನ್ನು ಉಳಿಸಿ ಕೊಟ್ಟಿದ್ದೇನೆಂಬ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಇದರ ಬಗ್ಗೆ ಒಂದು ದಿವಸ ಚರ್ಚೆ ಮಾಡೋಣ. 300–400 ಕೋಟಿ ಅವ್ಯವಹಾರ ನಡೆದಿದೆ ಎಂದು ನನ್ನ ಮೇಲೆ ವರದಿ ಕೊಟ್ಟಿದ್ದಾರೆ. ವಿದೇಶಿ ಪ್ರವಾಸಕ್ಕೆ ನಾನು ಹೋಗಿಲ್ಲವೆಂದು ವರದಿಯಲ್ಲಿ ಹೇಳಿದ್ದಾರೆ. ಆದರೆ, ಡೈರೆಕ್ಟರ್‌ಗಳು ವಿದೇಶಕ್ಕೆ ಹೋಗಿದ್ದಾರೆಂದು ಹೇಳಿದ್ದಾರೆ. ಆಡಳಿತ ಮಂಡಳಿಯಲ್ಲಿರುವಂಥ ಅಧಿಕಾರಿಗಳು ಕಾನೂನು ಬಿಟ್ಟು ಏನಾದರೂ ಮಾಡಿದ್ದರೆ ಅವರ ಮೇಲೆ ಏನು ಬೇಕಾದರೂ ಮಾಡಲಿ. ಬಡವರ ಹೆಣ್ಣು ಮಕ್ಕಳು ಓದುವುದಕ್ಕೋಸ್ಕರ 12 ಕೋಟಿ ರೂಪಾಯಿ ವೆಚ್ಚದಲ್ಲಿ ಕಟ್ಟಡ ಕಟ್ಟುವುದಕ್ಕೆ ನಾನು ಅವಕಾಶ ಕೊಟ್ಟಿರುವುದೇ ತಪ್ಪೆ?

ಉಪಾಧ್ಯಕ್ಷರು: ಮಾನ್ಯ ರೇವಣ್ಣನವರೆ, ತಾವು ಈಗಾಗಲೇ ಹೇಳಿರುವ ವಿಷಯವನ್ನೆ ಮತ್ತೆ ರಿಪೀಟ್ ಮಾಡುತ್ತಿದ್ದೀರಿ. ಬೇರೆ ವಿಷಯ ಇದ್ದರೆ ಹೇಳಿ. ಸರಿ ಇದ್ದರೆ ನಾನು ಅವಕಾಶ ಕೊಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ: ಬೇಕಾದರೆ ಸ್ಥಳಕ್ಕೆ ನಾನು ಕರೆದುಕೊಂಡು ಹೋಗುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ

ಸಹಕಾರ ಸಚಿವರೂ ಕೂಡ ಅಲ್ಲಿಗೆ ಬರಲಿ. ನಾನು ಮಾಡಿರುವುದು ತಪ್ಪೆಂದು ಹೇಳಿದರೆ ನಾನು ಬಿಟ್ಟು ಹೋಗುತ್ತೇನೆ.

ಉಪಾಧ್ಯಕ್ಷರು: ಪ್ರಶ್ನೋತ್ತರ ಅವಧಿಯಲ್ಲಿ ಇದರ ಬಗ್ಗೆ ಹೆಚ್ಚಿಗೆ ಅವಕಾಶ ಕೊಡುವುದಿಲ್ಲ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ. ರೇವಣ್ಣ: 300–400 ಕೋಟಿ ರೂಪಾಯಿ ಚಾರ್ಜ್‌ಸ್ ಬಗ್ಗೆ ನಾನು ಹೇಳಿಲ್ಲವೆಂದು ಮಾನ್ಯ ಮುಖ್ಯಮಂತ್ರಿಯವರು ಈ ಸಭೆಯಲ್ಲಿ ಹೇಳಲಿ. ಒಂದು ವೇಳೆ ನನ್ನ ಮೇಲೆ ಚಾರ್ಜಸ್ ಇದ್ದರೆ ಯಾವ ರೀತಿಯ ತನಿಖೆಯಾದರೂ ನನ್ನ ಮೇಲೆ ಮಾಡಿಕೊಳ್ಳಲಿ. ಅದಕ್ಕೆ ನಾನು ಒಪ್ಪಿಕೊಳ್ಳುತ್ತೇನೆ.

ಉಪಾಧ್ಯಕ್ಷರು: ಈಗಾಗಲೇ ಈ ವಿಷಯವನ್ನು ಅವರಿಗೆ ಹೇಳಿದ್ದೀರಿ.

ಶ್ರೀ ಲಕ್ಷ್ಮಣ ಸ. ಸವದಿ: ಮಾನ್ಯ ಉಪಾಧ್ಯಕ್ಷರೆ, ಪದೇ ಪದೇ ಅದರ ಬಗ್ಗೆ ತಿಳಿಸಿ ಹೇಳಿದ್ದೇನೆ. ಆದರೆ, ಅವರು ಅರ್ಥಮಾಡಿಕೊಳ್ಳುತ್ತಿಲ್ಲ. ನಿಮ್ಮ ಕೆ.ಎಂ.ಎಫ್.ನಲ್ಲಿ ಸುಮಾರು 300 ರಿಂದ 400 ಕೋಟಿ ರೂಪಾಯಿ ಅವ್ಯವಹಾರ ಆಗಿರತಕ್ಕದ್ದಂಥ ಆರೋಪ ಇದೆ ಎಂದು ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ. ಆದರೆ, ನೀವು ಮಾಡಿದ್ದೀರೆಂದು ಅವರು ಹೇಳಿಲ್ಲ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಸಹಕಾರ ಇಲಾಖೆ ಸಚಿವರು ಸದನವನ್ನು ತಪ್ಪು ದಾರಿಗೆ ಎಳೆದುಕೊಂಡು ಹೋಗುತ್ತಿದ್ದಾರೆ. 300 ಕೋಟಿ ರೂಪಾಯಿ ಎಂದು ಇವತ್ತಿನ ದಿವಸ ಕೊಟ್ಟಿದ್ದಾರೆಯೇ? ಡೆಂಪೋ ಡೈರಿ ಮತ್ತು ಕೆ.ಎಂ.ಎಫ್. ನಿಂದ 12 ಕೋಟಿ ರೂಪಾಯಿ ವೆಚ್ಚದಲ್ಲಿ ಬಿಲ್ಡಿಂಗ್ ಕಟ್ಟಿರುವ ಬಗ್ಗೆ ಮಾತ್ರ ಇದೆ. ಇದರಲ್ಲಿ 300 ಕೋಟಿ ರೂಪಾಯಿ ಏನಾದರೂ ಇದ್ದರೆ ಸದನದಲ್ಲಿ ಇವತ್ತಿನ ದಿವಸ ಪ್ರೂವ್ ಮಾಡಲಿ. ಪ್ರೂವ್

ಮಾಡಿದರೆ ನಾನು ರಾಜೀನಾಮೆ ಕೊಡುತ್ತೇನೆ. ಇಲ್ಲದಿದ್ದರೆ ಅವರು ರಾಜೀನಾಮೆ ಕೊಡುತ್ತಾರೆಯೇ ಕೇಳಿ? 12 ಕೋಟಿ ರೂಪಾಯಿ ಖರ್ಚು ಮಾಡಿ ಹೆಣ್ಣು ಮಕ್ಕಳಿಗೆ ಹಾಸ್ಟೆಲ್ ಕಟ್ಟಡ ಕಟ್ಟಲಾಗಿದೆ. ಇದಕ್ಕೆ ಇಲಾಖೆ ಪರ್ಮಿಷನ್ ಕೊಟ್ಟಿದೆ. ನಾನು ಹೇಳಿರುವುದನ್ನು ಇಲ್ಲವೆಂದು ಅವರು ಹೇಳಲಿ, ನಾನು ಇನ್ನು 5 ನಿಮಿಷ ಈ ಸದನದಲ್ಲಿರುವುದಿಲ್ಲ. ಇಲ್ಲದಿದ್ದರೆ ಅವರು ರಾಜೀನಾಮೆ ಕೊಡುತ್ತಾರೆಯೇ ಕೇಳಿ? ನಾನೇನಾದರೂ ಆಪಾದನೆ ಮಾಡಿ ದುಡ್ಡು ತಿಂದಿದ್ದರೆ ಹೇಳಲಿ. ಈ ಸದನದಲ್ಲಿ 5 ನಿಮಿಷ ಇರುವುದಿಲ್ಲ.

ಶ್ರೀ ಲಕ್ಷ್ಮಣ ಸ. ಸವದಿ: ಮಾನ್ಯ ಉಪಾಧ್ಯಕ್ಷರೆ, ನಾನೇಕೆ ರಾಜೀನಾಮೆ ಕೊಡಲಿ. ನನಗೆ ಇನ್ನು ಭವಿಷ್ಯ ಇದೆ. ಸಮಾಜ ಮೆಚ್ಚುವಂಥ ಒಳ್ಳೆಯ ಕೆಲಸ ಮಾಡುತ್ತೇನೆ. ಆದ್ದರಿಂದ ನಾನೇಕೆ ರಾಜೀನಾಮೆ ಕೊಟ್ಟು ಹೋಗಲಿ.

ಶ್ರೀ ಹೆಚ್.ಡಿ. ರೇವಣ್ಣ: ನಾನೇನು ಹೆದರಿಕೊಂಡು ಹೋಗುವುದಿಲ್ಲ.

(ಗೊಂದಲ)

ಉಪಾಧ್ಯಕ್ಷರು: ಮಾನ್ಯ ಸವದಿಯವರೆ, ದಯವಿಟ್ಟು ಕುಳಿತುಕೊಳ್ಳಿ. ಈಗ ಫರ್ದರ್ ಕ್ಲಾರಿಫಿಕೇಷನ್ ಬೇಡ. ಎಲ್ಲರೂ ಕುಳಿತುಕೊಳ್ಳಿ. ಇದರ ಬಗ್ಗೆ ಚರ್ಚೆ ಸಾಕು.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಮುಖ್ಯಮಂತ್ರಿಯವರು ಈ ವಿಷಯವನ್ನು ಸಭೆಯಲ್ಲಿ ಹೇಳಿದ್ದಾರೆ. ಆದ್ದರಿಂದ, ಇದನ್ನು ಒಪ್ಪಿಕೊಳ್ಳಲಿ ಅಥವಾ ಈ ವಿಷಯವನ್ನು ವಾಪಸ್ಸು ತೆಗೆದುಕೊಳ್ಳಲಿ.

(ಗೊಂದಲ)

ಶ್ರೀ ಎಸ್. ಶಿವಣ್ಣ: ಬಡ ಹೆಣ್ಣು ಮಕ್ಕಳು ಈಗ ಯಾವ ಹಾಸ್ಟೆಲ್‌ನಲ್ಲಿ ಓದುತ್ತಿದ್ದಾರೆ?

(ಗೊಂದಲ)

ಉಪಾಧ್ಯಕ್ಷರು: ಮಾನ್ಯ ರೇವಣ್ಣರವರೆ, ನಿಮ್ಮ ಮೇಲೆ ವೈಯಕ್ತಿಕವಾಗಿ ನೇರವಾದ ಆಪಾದನೆ ಇಲ್ಲ.

ಶ್ರೀ ಹೆಚ್.ಡಿ. ರೇವಣ್ಣ: ಸದನದಲ್ಲಿ ಇವರೇ ರಿಪ್ಲೈ ಕೊಟ್ಟಿದ್ದಾರೆ.

ಶ್ರೀ ಎಸ್. ಶಿವಣ್ಣ: ಹೆಣ್ಣು ಮಕ್ಕಳು ಎಲ್ಲಿ ಓದುತ್ತಿದ್ದಾರೆ? ಹಾಲಿನ ಡೈರಿಯಲ್ಲಿ ಏನಾದರೂ ಓದುತ್ತಿದ್ದಾರೆಯೇ ?

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ: ಅಲ್ಲಿ ಉತ್ಪಾದನೆ ಮಾಡಿಲ್ಲವೆಂದರೆ ಸದನದ ಕಡತವನ್ನು ತೆಗೆಸಿ ನೋಡಿ. ಕಡತ ಕೂಡ ಸುಳ್ಳಾಗುತ್ತದೆಯೇ?

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ಪ್ರತಿ ದಿವಸ ಪತ್ರಿಕೆಯಲ್ಲಿ ಬರೆಸುವುದು ನನಗೂ ಕೂಡ ಗೊತ್ತಿದೆ. ಪೇಪರ್‌ನಲ್ಲಿ ಬರೆಸಿದರೆ ನಾವೇನು ಹೆದರಿಕೊಂಡು ಹೋಗುವುದಿಲ್ಲ.

ಉಪಾಧ್ಯಕ್ಷರು: ಯಾವುದಾದರೊಂದು ನಿಯಮದ ಅಡಿಯಲ್ಲಿ ಈ ವಿಷಯವನ್ನು ತೆಗೆದುಕೊಂಡು ಬನ್ನಿ. ಆಗ ಸಮಗ್ರವಾಗಿ ಚರ್ಚೆ ಮಾಡೋಣ.

ಶ್ರೀ ಹೆಚ್.ಡಿ. ರೇವಣ್ಣ: ಚರ್ಚೆಗೆ ನಾನು ಸಿದ್ದನಿದ್ದೇನೆ. ತಾವು ಅವರನ್ನು ಕೇಳಿ.

ಉಪಾಧ್ಯಕ್ಷರು: ಈ ಪ್ರಶ್ನೆಗೆ ಸಂಬಂಧಪಟ್ಟಂಥ ಚರ್ಚೆ ಮುಗಿಯಿತು. ಮುಂದಿನ ಪ್ರಶ್ನೆ ಕೆ. ರಾಜುರವರದು.